© 2013 IJCRT | Volume 1, Issue 1 August 2013 | ISSN: 2320-2882

# ಸಮಾಜ, ವರ್ಣ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಅಂತರ್ ಸಂಬಂಧ

# Samaja, Varna Vyavasthe Mattu Asprushyateya Anthar Sambandha

**Dr. K Anjanappa**

Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ನಮ್ಮ ಸಮಾಜ ವ್ಯವಸ್ಥೆಯಲ್ಲಿ ಏಳು ಜನರಲ್ಲಿ ಒಬ್ಬನನ್ನು ಅಸ್ಪೃಶ್ಯನೆಂದು ಪರಿಗಣಿಸುವ ಪರಿಪಾಠವಿದೆ. ಅಸ್ಪೃಶ್ಯ ಎನ್ನಿಸಿಕೊಂಡವನನ್ನು ಸಾಮಾಜಿಕ ಬದುಕಿನಿಂದ ದೂರವಿಡುವುದೇ ಈ ಆಚರಣೆಯ ಗುರಿ. ಇದು ಆರೋಗ್ಯದ ಕಾರಣದಿಂದ ಹುಟ್ಟಿದ್ದಲ್ಲ ಸಾಮಾಜಿಕ ಕಾರಣದಿಂದ ಹುಟ್ಟಿದು. ಸಾವಿರಾರು ವರ್ಷಗಳ ಇತಿಹಾಸವಿರುವ ಅಸ್ಪೃಶ್ಯತೆ ವರ್ಣವ್ಯವಸ್ಥೆಯ ಹುಟ್ಟಿನ ಅನಂತರ ಜಾರಿಗೆ ಬಂದಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಜನಾಂಗ ಘರ್ಷಣೆಯಲ್ಲಿ ಸೆರೆಸಿಕ್ಕವರು, ಗೋಮಾಂಸ ಭಕ್ಷಣೆಯನ್ನು ಮುಂದುವರಿಸಿದವರು ಅಸ್ಪೃಶ್ಯರಾದರು ಎಂಬ ಅಭಿಪ್ರಾಯವೂ ಇದೆ.

ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೂ ಸಮಾಜದ ಒಂದು ಅಂಗವಾಗಿಯೇ ಬೆಳೆದು ಬಂದು ವಿವಿಧ ಸಂಶೋಧಕರ, ವಿಚಾರವಂತರ ಬರವಣಿಗೆಗಳಲ್ಲಿ ವಿಶಿಷ್ಟ ಆಯಾಮಗಳನ್ನು ಪಡೆದುಕೊಂಡಿರುವ ಜಾತಿ ಪದ್ಧತಿಯ ಉಗಮದ ಬಗ್ಗೆ ಸಾಮಾನ್ಯವಾಗಿ ವ್ಯಕ್ತವಾಗುವ ಕೆಲವು ವಿಚಾರಗಳನ್ನು ಗಮನಿಸಿದಾಗ ಹಿಂದೂ ಧರ್ಮವೆಂದು ನಾವು ಯಾವುದನ್ನು ಗುರುತಿಸಿಕೊಳ್ಳುತ್ತೇವೆಯೊ ಅದರ ಸ್ವರೂಪವು ಜಾತಿ ವ್ಯವಸ್ಥೆಯ ರಚನಾಕ್ರಮದಲ್ಲಿದೆ ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲಾಮಾನವರಿಗೂ ಸ್ವೀಕಾರಾರ್ಹವಾದುದೇ 'ಧರ್ಮ' ಎಂಬ ವಿಶಾಲ ಅರ್ಥದಿಂದ ಧರ್ಮವನ್ನು ವ್ಯಾಖ್ಯಾನಿಸಲಾಗಿದೆ. ಆದರೆ ಈ ಧರ್ಮ ಕಾಲಾನಂತರದಲ್ಲಿ ಸಂಕುಚಿತ ಅರ್ಥವನ್ನು ತಳೆದಿದೆ. ಕೃತಿಗಳಲ್ಲಿ ಒಂದು ಬಗೆಯಾಗಿ ದಾಖಲಾದರೆ ವಾಸ್ತವದಲ್ಲಿ ಮತ್ತೊಂದು ಬಗೆಯಾಗಿ ಬಳಕೆಯಲ್ಲಿರುವುದು ಕಂಡುಬರುತ್ತದೆ. ಹಿಂದೂ ದೇಶದಲ್ಲಿ ಜನಿಸಿದ ಯಾರೇ ಅಗಲಿ ಅವನು ಒಂದಲ್ಲ ಒಂದು ಜಾತಿಗೆ ಸೇರಿದವನಾಗಿರುತ್ತಾನೆ, ಏಕೆಂದರೆ ಹಿಂದೂ ಧರ್ಮದಲ್ಲಿ ಹುಟ್ಟುವುದೆಂದರೆ ಬ್ರಾಹ್ಮಣನಾಗಿಯೋ, ಕ್ಷತ್ರಿಯನಾಗಿಯೋ, ವೈಶ್ಯನಾಗಿಯೊ, ಶುದ್ರನಾಗಿಯೊ ಅಥವಾ ಸಂಪೂರ್ಣವಾಗಿ ಸಮಾಜದ ಎಲ್ಲೆಯ ಹೊರಗೆ ನಿಲ್ಲುವ ಅವಣೀಯನಾಗಿಯೊ ಹುಟ್ಟುವುದೇ ಆಗಿದೆ.

ಭಾರತದಲ್ಲಿ ಮೊದಲು ವರ್ಣ ವ್ಯವಸ್ಥೆ ರೂಢಿಯಲ್ಲಿತ್ತು. ಇದು ಯಾವಾಗ ಯಾವ ಕಾರಣಗಳಿಂದ ಆರಂಭಗೊಂಡಿತೆಂದು ಹೇಳುವುದು ಕಷ್ಟ. ಏಕೆಂದರೆ ಯಾವುದೇ ಸಾಮಾಜಿಕ ವ್ಯವಸ್ಥೆಯ ಉಗಮದ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ವೇದಗಳಿಂದಲೇ ಆರಂಭವಾದ, ವೇದಗಳಲ್ಲೇ ಕಂಡುಬರುವ ವರ್ಣ ವ್ಯವಸ್ಥೆ ಮುಂದೆ ಜಾತಿಗಳಿಗೆ ಎಡೆಮಾಡಿಕೊಟ್ಟಿತು ಎಂಬುದು ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರ ಅಭಿಪ್ರಾಯ. ವರ್ಣದ ಪರಿಕಲ್ಪನೆಯನ್ನು ವಿವೇಚಿಸಿದಾಗ ಕೆಲವು ಅಂಶಗಳು ಗೋಚರವಾಗುತ್ತವೆ. 'ಚಾತುರ್ವರ್ಣ' ಎಂಬುದು ಹಿಂದೂ ಧರ್ಮದ ಒಂದು ಸಾಮಾಜಿಕ ವಿಭಜನಾ ವ್ಯವಸ್ಥೆ. ಇದು ಪ್ರಾಚೀನ ಸಮಾಜದಲ್ಲಿ ಶ್ರಮವಿಭಜನೆಯ ತತ್ವದಡಿಯಲ್ಲಿ ರೂಪಿತವಾಗಿದೆ. ಬ್ರಾಹ್ಮಣ ಅಧ್ಯಯನ, ಅಧ್ಯಾಪನ, ಯಜ್ಞಯಾಗಾದಿಗಳಲ್ಲಿಯೂ, ಕ್ಷತ್ರಿಯ ರಾಜ್ಯಾಡಳಿತದಲ್ಲಿಯೂ, ವೈಶ್ಯ ವ್ಯಾಪಾರ–ವ್ಯವಹಾರದಲ್ಲಿಯೂ, ಮತ್ತು ಶೂದ್ರ ಕೃಷಿ–ಕೂಲಿಕಾರರಾಗಿಯೂ ಕಾರ್ಯ ನಿರ್ವಹಿಸುತ್ತಾ ಬಂದಿರುವುದನ್ನು ಕಾಣುತ್ತೇವೆ.

'ಶೂದ್ರರಿಗಿಂತ ಕೆಳಗಿನವರಾದ ಅಂತ್ಯಜರ ಪರಿಸ್ಥಿತಿಯಂತು ಅವರು ಮನುಷ್ಯರೇ ಅಲ್ಲವೇನೋ ಎನಿಸುವಂತಿತ್ತು. ಅವರಿಗೆ ಚತುರ್ವರ್ಣದ ಚೌಕಟ್ಟಿನೊಳಗೂ ಜಾಗ ಕೊಟ್ಟಿರಲಿಲ್ಲ. ಅವರ ಸ್ಥಾನ ಎಷ್ಟು ನಿಕೃಷ್ಟವಾಗಿತ್ತೆಂದರ ಕಲವೊಮ್ಮೆ ಅವರನ್ನು ಪಶುಗಳಿಗಿಂತಲೂ ಕೀಳಾಗಿ ಹಂದಿ–ನಾಯಿಗಳಿಗಿಂತಲೂ ಕಡೆಯಾಗಿ ಕಾಣುತ್ತಿದ್ದರು.' ಎಂದು ಖ್ಯಾತ ಮಾರ್ಕ್ಸ್‌ವಾದಿ ಚಿಂತಕ ಎಸ್.ಜಿ. ಸರದೇಸಾಯಿ ಹೇಳುತ್ತಾರೆ. 'ಸಾಮಾಜಿಕ ಮತ್ತು ಆರ್ಥಿಕ ಜೀವನವು ಹೆಚ್ಚು ಹೆಚ್ಚು ವಿಕಾಸಗೊಂಡಂತೆ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರೊಡನೆ ಹಂಚಲ್ಪಡುವ ಹೆಚ್ಚುವರಿ ಉತ್ಪಾದನೆಯ ಪ್ರಮಾಣ ಬೆಳೆಯುತ್ತಾ ಅದನ್ನು ಉತ್ಪಾದಿಸುವುದರಿಂದ ಶೂದ್ರ ಜಾತಿಯವರ ಶ್ರಮಭಾರವೂ ಬಹುಮುಖವಾಗಿ ಬೆಳೆದಾಗ ಜಾತಿಗಳ ಸಂಖ್ಯೆಯೂ ಅವುಗಳ ಅಸಮಾನತೆಯೂ ಹೆಚ್ಚಾಯಿತು'. ಎಂದು ಇ.ಎಂ. ನಂಬೂದಿರಿಪಾಡ್ ಹೇಳುತ್ತಾರೆ. ಎಲ್ಲಾ ಜಾತಿಗಳ ಉದಯಕ್ಕೆ 'ವರ್ಣವೇ' ಮೂಲವಾಗಿದೆ.

ಭಾರತೀಯ ಸಮಾಜದ ಇತಿಹಾಸವನ್ನು ಅರಿಯಲು ಕ್ರಿ.ಪೂ. 1500–1000ರ ಅವಧಿಯ ವೇದಗಳೇ ನಮಗೆ ಪ್ರಮುಖ ಆಕರ. ಇದರಲ್ಲಿ ವರ್ಣವ್ಯವಸ್ಥೆಗೆ ಸಂಬಂಧಿಸಿದ ಸಂಪೂರ್ಣ ಚಿತ್ರಣವನ್ನು ಕಾಣುತ್ತೇವೆ. ವೇದಗಳಲ್ಲಿ ಮೊದಲನೆಯದಾದ 'ಋಗ್ವೇದ'ದಲ್ಲಿ 'ಬ್ರಾಹ್ಮಣ ಮತ್ತು ಕ್ಷತ್ರಿಯ' ವರ್ಣಗಳ ಉಲ್ಲೇಖವಿದೆ. ಋಗ್ವೇದಕ್ಕೆ ಬಳಿಕ ಸೇಪರ್ಡೆಯಾಯಿತೆನ್ನಲಾದ 'ಪುರುಷಸೂಕ್ತ' ಐತಿಹಾಸಿಕ ಭಾರತೀಯ ಸಮಾಜದ ಚಾತುರ್ವರ್ಣದ ವ್ಯವಸ್ಥೆಯನ್ನು ನಮ್ಮ ಮುಂದಿರಿಸಿದೆ. ಈ ಸೂಕ್ತದ ಕಾಲಕ್ಕಾಗಲೇ ಸಮಾಜದ ನಾಲ್ಕು ಗುಂಪುಗಳಂತೆ ವಿಭಾಗಗೊಂಡಿತೆಂಬುದು ನಮಗೆ ಸ್ಪಷ್ಟವಾದರೂ ಅದಕ್ಕಿಂತ ಎಷ್ಟು ಹಿಂದೆ ವಿಭಾಗಗೊಂಡಿತೆಂಬುದಕ್ಕೆ ಆಧಾರಗಳು ಸಿಗಲಾರವು.

ಈ ಚಾತುರ್ವರ್ಣದ ಉಗಮವನ್ನು ಸಮಕಾಲೀನವೆಂದು ಭಾವಿಸದೆ ತುಂಬಾ ಹಿಂದಿನದೆಂದು ಭಾವಿಸಲಾಗಿದೆ. 'ಏಕೆಂದರೆ ಬ್ರಹ್ಮನ ಮುಖ ಮೊದಲಾದ ಅಂಗಗಳಿಂದ ನಾಲ್ಕು ವರ್ಣಗಳು ಉಗಮಗೊಂಡವು ಎಂಬ ಮಾತನ್ನು ಆ ಸೂಕ್ತ ಹೇಳುತ್ತದೆ. ಮತ್ತು 'ತೈತ್ತರಿಯ ಸಂಹಿತೆ' ಯಲ್ಲಿಯೂ ಈ ನಾಲ್ಕು ಗುಂಪುಗಳು ಸೃಷ್ಟಿಕರ್ತನ ನಾಲ್ಕು ಅಂಗಗಳಿಂದ ಹುಟ್ಟಿದುದನ್ನು ಹೇಳಿದೆ. ಮುಖದಿಂದ ಹುಟ್ಟಿದ ಬ್ರಾಹ್ಮಣರು ಮುಖ್ಯರು, ಬಾಹುವಿನಿಂದ ಹುಟ್ಟಿದ ರಾಜನ್ಯರು ಶಕ್ತರು, ಉದರದಿಂದ ಹುಟ್ಟಿದ ವೈಶ್ಯರು ತಿನ್ನಲ್ಪಡಬೇಕಾದವರು (ತೆರಿಗೆ ಹಾಕಿ ವಸೂಲಿ ಮಾಡಿ) ಕಾಲಿಂದ ಹುಟ್ಟಿದ ಶೂದ್ರರು ಇತರರನ್ನು ಹೊರಬೇಕಾದವರು ಎಂದರೆ ಆಯಾ ಗುಂಪಿನ ಕರ್ತವ್ಯಗಳಿಗೆ ಒಂದು ದೈವಿಪುರಾಣವನ್ನು ಮೇಲಿನ ವಿಶ್ವಪುರುಷ ಅಂಗಗಳ ಪ್ರತಿಮೆ ಒದಗಿಸುತ್ತದೆ. ಇದೇ ಸಂಗತಿಯನ್ನು 'ಭಾಗವತಪುರಾಣ'ವೂ ಹೇಳುತ್ತದೆ. 'ಬೃಹದಾರಣ್ಯಕ ಉಪನಿಷತ್' ಸೇವೆ ಮಾಡಲು ಶೂದ್ರನನ್ನು ಬ್ರಹ್ಮನೇಸೃಷ್ಟಿಸಿದ ಎಂದು ಹೇಳಿ ಯಾರು ಭೂಮಿಯ ಸೇವೆಯನ್ನು ಮಾಡುತ್ತಾನೋ ಅವನೇ ಶೂದ್ರನೆನ್ನುತ್ತದೆ. ಆದರೆ ತೈತ್ತರೀಯ ಬ್ರಾಹ್ಮಣವು ಬ್ರಾಹ್ಮಣರು ದೇವರಿಂದಲೂ, ಶೂದ್ರರೂ ರಾಕ್ಷಸರಿಂದಲೂ ಜನಿಸಿದರೆಂದು ಹೇಳುತ್ತದೆ.

ಋಗ್ವೇದದಲ್ಲಿ 'ಆರ್ಯ' ಮತ್ತು 'ದಾಸ' ವರ್ಗಗಳನ್ನು ಬೇರ್ಪಡಿಸಿ ಹೇಳಲು 'ವರ್ಣ' ಪದ ಬಳಸಲ್ಪಟ್ಟಿದೆ. ಇಲ್ಲಿ ಆರ್ಯರ ವರ್ಣವು ದಸ್ಯುಗಳ ವರ್ಣಕ್ಕಿಂತ ಶ್ರೇಷ್ಠವೆಂಬ ಸೂಚನೆಗಳು ಅಲ್ಲಿವೆ. 'ದಾಸ' ಅಥವಾ 'ದಸ್ಯು'ಗಳು ಇಲ್ಲಿನ ಮೂಲನಿವಾಸಿಗಳಾಗಿದ್ದು, ಆರ್ಯರಿಂದ ಸೋಲಿಸಲ್ಪಟ್ಟ ಮೇಲೆ ಗುಲಾಮರಾಗಿ ಅನಾರ್ಯರಾಗಿರಬಹುದು. 'ಶತಪಥ ಬ್ರಾಹ್ಮಣ' ದಲ್ಲಿ ಮೊತ್ತ ಮೊದಲು ಬ್ರಾಹ್ಮಣ ಇತ್ಯಾದಿ ವರ್ಗಗಳನ್ನು ನಾಲ್ಕು ವರ್ಣಗಳೆಂದು ಹೇಳಿರುವುದಲ್ಲದೆ ಆ ನಾಲ್ಕು ವರ್ಣಗಳವರ ಸಮಾಧಿಗಳು ಬೇರೆ ಬೇರೆ ಗಾತ್ರದವಾಗಿರಬೇಕೆಂದೂ ಅವರ ಸಂಬೋಧನಾ ವಿಧಾನಗಳೂ ಬೇರೆಯೆಂದೂ ಹೇಳಿದೆ. ಇವರಲ್ಲಿ ಬ್ರಾಹ್ಮಣ ಶ್ರೇಷ್ಠ ರಾಜ ಆಳುವುದು ಬ್ರಾಹ್ಮಣ ಕೊಟ್ಟ ಅಧಿಕಾರದಿಂದ, 'ಶತಪಥ ಬ್ರಾಹ್ಮಣ'ದ ಪ್ರಕಾರ ಯಜುರ್ವೇದವೂ ಅದಕ್ಕೆ ದನಿಗೂಡಿಸುತ್ತದೆ. ಬ್ರಾಹ್ಮಣನ ಕೊಲೆಯೊಂದೇ ಗಂಭೀರವಾಗಿ ಪರಿಗಣಿಸಬೇಕಾದ ಕೊಲೆ, ಬ್ರಾಹ್ಮಣ–ಅಬ್ರಾಹ್ಮಣರಿಗೆ ವಿವಾದವೊಂದು ಸಂಭವಿಸಿದರೆ ನ್ಯಾಯ ಬ್ರಾಹ್ಮಣನದೇ. ಅವನ ಕೆಲಸ ಮುಖ್ಯವಾಗಿ ಪೌರೋಹಿತ್ಯ, ಬ್ರಹ್ಮಚರ್ಯ ಮತ್ತು ಸತ್ಯ ಅವನ ಮುಖ್ಯ ಗುಣಗಳು. ಕ್ಷತ್ರಿಯರು ಆಡಳಿತಗಾರರಾಗಿದ್ದರೂ ಕೊಳಲು ವಾದಕರಾಗಿದ್ದು ಮತ್ತು ದಾರ್ಶನಿಕರಾಗಿದ್ದ ಕೆಲವು ದೊರೆಗಳ ಹೆಸರುಗಳು ಲಭ್ಯವಾಗುತ್ತವೆ. ವೈಶ್ಯರು ಸಾಮಾನ್ಯ ಪ್ರಜೆಗಳಷ್ಟೇ, ಶೂದ್ರ ಋಗ್ವೇದದಲ್ಲಿ ಇವನ ಹೆಸರು ಒಮ್ಮೆ ಮಾತ್ರ ಗೋಚರ, ವಂಶಪಾರಂಪರ್ಯ ಸೇವಕ, ಕೊಲ್ಲಬಹುದು.'

'ಪಂಚವಿಂಶತಿ ಬ್ರಾಹ್ಮಣ' ದ ಪ್ರಕಾರ ಶೂದ್ರನು ಒಂದು ವೇಳೆ ಶ್ರೀಮಂತನಾಗಿದ್ದರೂ ಅವನು ಇನ್ನೊಬ್ಬನ ಸೇವಕನಾಗಿ ಮಾತ್ರ ಇರಬೇಕು. ತನ್ನ ಯಜಮಾನನ ಕಾಲನ್ನೂ ತೊಳೆಯುವುದು ಅವನ ಕಾರ್ಯ. ಕೆಲವು ಶೂದ್ರರು ರಾಜರ ಮಂತ್ರಿಗಳಾಗಿದ್ದರೂ ಒಟ್ಟಾರೆ ಅವರು ಯಜ್ಞಕ್ಕೂ ಅನರ್ಹರು. ಯಜ್ಞ ಶಾಲೆಯಲ್ಲಿರಲು ಅನರ್ಹರು. 'ಶತಪಥ ಬ್ರಾಹ್ಮಣರ' ಪ್ರಕಾರ ಶೂದ್ರ ಎಂಬುದು ಅಸತ್ಯಕ್ಕೆ ಇನ್ನೊಂದು ಹೆಸರು. ಶೂದ್ರ ಹೆಣ್ಣು ಇರುವುದು ಭೋಗಕ್ಕಾಗಿಯೇ ಹೊರತು ಅವಳಿಂದ ಏನೂ ಉದಾತ್ತ ಕಾರ್ಯ ಸಾಧ್ಯವಿಲ್ಲ ಎನ್ನುತ್ತದೆ. ಅಂಬೇಡ್ಕರ್ ಶೂದ್ರರ ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ. "ಬೇರೆ ಬೇರೆ ವರ್ಗದ ಮಧ್ಯೆ ಸ್ಥಾನಮಾನಗಳ ಮೇಲು–ಕೀಳುಗಳನ್ನು ಹೊಂದುವುದು ಶೂದ್ರರನ್ನು ಅಸ್ಪೃಶ್ಯರನ್ನು ಸಂಪೂರ್ಣ ನಿರಾಯುಧರನ್ನಾಗಿಸುವಿಕೆ, ಶೂದ್ರ ಮತ್ತು ಅಸ್ಪೃಶ್ಯರನ್ನು ವಿದ್ಯೆಯಿಂದ ಸಂಪೂರ್ಣವಾಗಿ ಬಹಿಷ್ಕರಿಸುವಿಕೆ, ಅಧಿಕಾರ ಮತ್ತು ಸ್ವಾಮ್ಯವನ್ನು ಶೂದ್ರರಿಗೂ ಮತ್ತು ಅಸ್ಪೃಶ್ಯರಿಗೂ ನಿಷೇಧಿಸುವುದು, ಸಂಪತ್ತಿನ ಶೇಖರಣೆಯ ಮೇಲೆ ಶೂದ್ರರಿಗೂ, ಅಸ್ಪೃಶ್ಯರಿಗೂ ನಿಷೇಧ ವಿಧಿಸುವುದು ಮತ್ತು ಸಂಪೂರ್ಣ ಶರಣಾಗತಿ ಮತ್ತು ಸ್ತ್ರೀಯರ ಮೇಲಿನ ದಬ್ಬಾಳಿಕೆ"

ವರ್ಣಗಳಲ್ಲಿ ಉತ್ತಮಿಕೆಯ ತಾರತಮ್ಯ ಕ್ರಿ.ಪೂ. 900 ರ ಹೊತ್ತಿಗೆ ಸ್ಪಷ್ಟವಾಗಿ ಸ್ಥಾಪಿತವಾಗಿದ್ದಿತು. ಎಲ್ಲಕ್ಕಿಂತ ಮೇಲಿನದು ಬ್ರಾಹ್ಮಣ ವರ್ಣ, ಕೆಳಗಿನದು ಶೂದ್ರವರ್ಣ, ಪಿ.ವಿ.ಕಾಣೆ ಭಾವಿಸುವಂತೆ "ವೇದಕಾಲದಲ್ಲಿ ನಾಲ್ಕು ವರ್ಣಗಳಲ್ಲೂ ಸಹಭೋಜನಕ್ಕೆ ನಿಷೇಧವಿರಲಿಲ್ಲ. ಮುಂದೆ ನಾಲ್ಕು ವರ್ಣಗಳು ಘನೀಭೂತವಾಗುತ್ತ ಹೋದಂತೆ ಅವುಗಳ ಮಧ್ಯೆ ಇದ್ದ ಪರಸ್ಪರ ಸಂಬಂಧಗಳು ತಪ್ಪಿ ಹೋದವು" ಎಂದಿದ್ದಾರೆ. ಋಗ್ವೇದದಲ್ಲಿ ಜಾತಿಗಳ ಉಲ್ಲೇಖವಿಲ್ಲವಾದರೂ ಬಡಗಿ, ಚಮ್ಮಾರನಾಯಕ, ವೈದ್ಯ, ಅಕ್ಕಸಾಲಿ, ವ್ಯಾಪಾರಿ, ರಥಕಾರ ಮುಂತಾದ ವೃತ್ತಿಕಾರರ ಹೆಸರಿವೆ. ಇವುಗಳಲ್ಲಿ ಯಾವ ಯಾವ ವರ್ಣಕ್ಕ ಸೇರಿದ್ದುವೆಂಬುದನ್ನು ಹೇಳುವುದು ಅಸಾಧ್ಯ ಅಥವಾ ಅವು ಒಂದೊಂದು ಪರಸ್ಪರ ಹೊರತಾದ ಗುಂಪುಗಳೇ ಎಂಬುದನ್ನು ಹೇಳುವ ಸ್ಥಿತಿಯಲ್ಲೂ ನಾವು ಇಲ್ಲ. ರಥಕಾರನು ಶೂದ್ರನಿಗಿಂತ ಉತ್ಕೃಷ್ಟನಾಗಿದ್ದಾನೆಂದು ನಾವು ಹೇಳಬಹುದು.

ಋಗ್ವೇದದಲ್ಲಿ 'ಜಾತಿ' ಶಬ್ದವಿಲ್ಲದಿದ್ದರೂ ನಿರುಕ್ತದಲ್ಲಿದೆ. ಪಾಣಿನಿಯಲ್ಲಿದೆ, ಈಚಿನ ಸ್ಮೃತಿ ಗ್ರಂಥಗಳಲ್ಲಿ ಜಾತಿ ಮತ್ತು ವರ್ಣಗಳಿಗೆ ವ್ಯತ್ಯಾಸ ಮಾಡಿದ್ದರೂ ಬಹು ಹಿಂದಿನಿಂದಲೂ ಅವುಗಳ ಮಧ್ಯೆ ಗೊಂದಲಗಳಿದ್ದೇ ಇವೆ. ವೇದೋತ್ತರ ಯುಗದಲ್ಲಿ ಪ್ರತಿವರ್ಣದಲ್ಲೂ ಅನೇಕ ಗುಂಪುಗಳು ಕಾಣಿಸಿಕೊಂಡವು. ಪತಂಜಲಿಯು 'ಆಭೀರ'ರು, ಶೂದ್ರರಿಂದ ಭಿನ್ನವಾದ ಜಾತಿಯೆಂದು ಹೇಳುವುದನ್ನು ನೋಡಿದರೆ ಆಭೀರರಂತೆಯೇ ಶೂದ್ರರೂ ಒಂದು ಜಾತಿಯೆನ್ನಿಸಿಕೊಳ್ಳುತ್ತಿತ್ತು ಎಂಬುದು ಸ್ಪಷ್ಟ. 'ವರ್ಣ'ವಾಗಿದ್ದ ಶೂದ್ರವು ಜಾತಿಯಾಗಿತ್ತು. ವರ್ಣ ಜಾತಿಗಳು ಸಮನಾರ್ಥಕಗಳಾಗಿದ್ದವು. ವರ್ಣ ಅಥವಾ ಜಾತಿಗಳಲ್ಲಿ ಮೇಲು ಕೀಳುಗಳ ಸ್ಪಷ್ಟ ಅನುಶ್ರೇಣಿ ಕಾಲಕ್ರಮೇಣ ನಿರ್ಮಾಣವಾಯಿತು. ಬ್ರಾಹ್ಮಣನು ಧರ್ಮಕ್ಕೆ ಪೂರ್ಣ ಅರ್ಹ, ಕ್ಷತ್ರಿಯ ಮುಕ್ಕಾಲು ಪಾಲು, ವೈಶ್ಯ ಅರ್ಧಪಾಲು, ಶೂದ್ರ ಕಾಲುಪಾಲು ಮಾತ್ರ ಅರ್ಹರು. ಬ್ರಾಹ್ಮಣನಿಗೆ ಎಂಟನೇ ವರ್ಷಕ್ಕೆ, ಕ್ಷತ್ರಿಯನಿಗೆ ಹನ್ನೊಂದನೇ ವರ್ಷಕ್ಕೆ ವೈಶ್ಯನಿಗೆ ಹನ್ನೆರಡನೆಯ ವರ್ಷಕ್ಕೆ ದೀಕ್ಷೆ, ಶೂದ್ರನಿಗೆ ಇಲ್ಲ.

ಅವನು 'ದ್ವಿಜ' ಅಲ್ಲ ಎಂದರೆ ಅವನಿಗೆ ಎರಡನೆಯ ಹುಟ್ಟು ಇಲ್ಲ. ಬ್ರಾಹ್ಮಣನಿಗೆ ಮೈಲಿಗೆಯ ಅವಧಿ ತೀರ ಕಡಿಮೆ. ಉಳಿದವರಿಗೆ ಕ್ರಮೇಣ ಆ ಅವಧಿ ಹೆಚ್ಚುತ್ತಾ ಹೋಗುತ್ತದೆ. ಒಬ್ಬ ಬ್ರಾಹ್ಮಣ ಇನ್ನೊಬ್ಬ ಬ್ರಾಹ್ಮಣನನ್ನು ಕೊಂದರೆ ಅವನಿಗೆ ದೇಶದಿಂದ ಬಹಿಷ್ಕಾರ ಹಾಕಬೇಕು. ಕ್ಷತ್ರಿಯ, ವೈಶ್ಯ, ಶೂದ್ರರು ಬ್ರಾಹ್ಮಣನನ್ನು ಕೊಂದರೆ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ಗಲ್ಲಿಗೇರಿಸಬಹುದು. ಇಲ್ಲಿ ಬ್ರಾಹ್ಮಣರ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲಾಗಿದೆ.

'ಮನು' ಮಾನವನ ಸೃಷ್ಟಿಯನ್ನು ವಿವರಿಸುತ್ತಾ ಮತ್ತು ಮೊದಲು ವರ್ಣಗಳಿಗೆ ವೃತ್ತಿಯನ್ನು ಗೊತ್ತುಮಾಡುತ್ತಾ ಈ ರೀತಿ ಹೇಳುತ್ತಾನೆ. "ವಿಶ್ವದ ಶ್ರೇಯಸ್ಸಿಗಾಗಿ ಬ್ರಹ್ಮನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರನ್ನು ಕ್ರಮವಾಗಿ ತನ್ನ ಬಾಯಿ, ಭುಜ, ತೊಡೆ ಮತ್ತು ಪಾದಗಳಿಂದ ಸೃಷ್ಟಿಸಿದನು. ಆದರೆ ಈ ವಿಶ್ವವನ್ನು ರಕ್ಷಿಸಲು ತನ್ನ ಬಾಯಿ, ಭುಜ, ತೊಡೆ ಮತ್ತು ಪಾದಗಳಿಂದ ಉದ್ಭವಿಸಿದವರಿಗೆ ವಿಶಿಷ್ಟ ಕಾರ್ಯಗಳನ್ನು ಹಾಗೂ ವೃತ್ತಿಗಳನ್ನು ಗೊತ್ತು ಮಾಡಿದನು. (ಮನು 1–31) ಎನ್ನುತ್ತಾನೆ" ಹೀಗೆ ದೇಶದ ಜನಾಂಗವನ್ನು ಬೇರೆ ಬೇರೆ ಗುಂಪುಗಳನ್ನಾಗಿ ವರ್ಗಿಕರಿಸುವುದರಲ್ಲಿ ಅವರವರ ಸಾಮರ್ಥ್ಯ ನಿರ್ಣಾಯಕವಾದ ಅಂಶವಾಗಿತ್ತು. ಅಂದರೆ ವೃತ್ತಿಗಳು ಹಾಗೂ ಕರ್ಮಗಳ ಆಧಾರದ ಮೇಲೆ ವರ್ಣಗಳು ತಲೆ ಎತ್ತಿದವು ಎಂಬುದು ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ. ಮುಂದೆ ಈ ರೀತಿಯ ವ್ಯವಸ್ಥೆಯಲ್ಲಿನ

ಅನುಕ್ರಮಣಿಕೆ ಸಮಾಜದಲ್ಲಿ ಮೇಲು ಕೀಳಿನ ಭಾವನೆಯನ್ನು ಉಂಟುಮಾಡಿತು. ವೃತ್ತಿಗಳು ವರ್ಣವನ್ನು ಪ್ರತಿನಿಧಿಸುವುದರಿಂದ ವೃತ್ತಿ, ವರ್ಣ, ಜಾತಿ ಈ ಮೂರು ಒಂದರೊಳಗೊಂದು ಬೆಸೆದುಕೊಂಡವು. ಸಾಮಾನ್ಯವಾಗಿ ಮೊದಲು ಮೇಲು–ಕೀಳು ತಾರತಮ್ಯವಿಲ್ಲದ್ದು ಅನಂತರ ಮೇಲು ಜಾತಿಯಲ್ಲಿ ಹುಟ್ಟಿದವು ಶ್ರೇಷ್ಠವೆಂದೂ, ಕೆಳ ಜಾತಿಯಲ್ಲಿ ಹುಟ್ಟಿದವು ಕನಿಷ್ಠ, ಕೀಳು ಎಂಬ ಧೋರಣೆಗಳು ಬೆಳೆದು ಬಂದವು. "ದೇವರೆ ಅವನನ್ನು ಇಂತಿಂತಹ ಜಾತಿಯಲ್ಲಿ ಹುಟ್ಟಿಸುತ್ತಾನೆ. ಅವನ ಸಾಮಾಜಿಕ ಮತ್ತು ಆರ್ಥಿಕ ವ್ಯಕ್ತಿತ್ವ ಪೂರ್ವ ನಿಶ್ಚಿತವಾಗಿರುತ್ತವೆ ಎಂಬ ಹಿಂದೂ ಧರ್ಮದ ಪೂರ್ವಜನ್ಮದ ಸಿದ್ಧಾಂತ, ಕರ್ಮಸಿದ್ಧಾಂತ, ದೈವಸಿದ್ಧಾಂತಗಳು ಮತ್ತು ಇವುಗಳಿಗೆ ತಾತ್ವಿಕ ನಿಲುವನ್ನು ಸಮರ್ಥಿಸಿಕೊಂಡದ್ದು – ಇವುಗಳು ವರ್ಣ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಾ ಬಂದವು" ಎನ್ನುವ ಅಭಿಪ್ರಾಯವನ್ನು ಕಾಣುತ್ತೇವೆ. ಆದರೆ ಇನ್ನೊಂದು ಬೆಳವಣಿಗೆಯ ಪ್ರಕಾರ "ಆರ್ಯರು ಭಾರತಕ್ಕೆ ಬರುವುದಕ್ಕಿಂತ ಮೊದಲು ಮೇಲಿನ ಮೂರು ವರ್ಣಗಳು ತಲೆ ಎತ್ತಿದ್ದು ಆರ್ಯರು ತಮ್ಮ ಅಲೆದಾಟದ ಅಂಗವಾಗಿ ಇಲ್ಲಿನ ಆದಿವಾಸಿಗಳಾಗಿದ್ದ ದ್ರಾವಿಡ ಜನಾಂಗದೊಡನೆ ಹೋರಾಡಿ ದ್ರಾವಿಡರನ್ನು ಸೆರೆಯಾಳುಗಳಾನ್ನಾಗಿಸಿಕೊಂಡರು..... ಮತ್ತು ಸೋತ ಇವರಿಗೆ ಆರ್ಥಿಕ, ಸಾಮಾಜಿಕ, ರಾಜಕೀಯವಾದ ಯಾವುದೇ ರೀತಿಯ ಪ್ರಭುತ್ವ ಸ್ಥಾನಮಾನ ಸ್ಥಾಪಿಸಿಕೊಳ್ಳಬಹುದಾದ ವೃತ್ತಿ ಇವರಿಗೆ ಧಕ್ಕದಂತೆ ಅವರು ತಮ್ಮ ಅಧೀನದಲ್ಲಿರುವಂತೆ ಆರ್ಯರು ಅವರನ್ನು ವಂಚಿಸಿದರು..... ಹೀಗೆ ಆರ್ಯರು ಆಳುವ ವರ್ಗವಾಗುತ್ತಾ ಹೊದಂತೆಲ್ಲ ಮೂಲ ನಿವಾಸಿಗಳಾದ ದ್ರಾವಿಡರು ಸೇವಕ ವರ್ಗವಾಗುತ್ತಾ ಹೋದರು" ಇದೇ ಮುಂದೆ ಶೂದ್ರ ವರ್ಗವಾಯಿತು ಎಂಬ ಅಂಶವನ್ನು ಕಾಣುತ್ತೇವೆ. ಜಾತೀಯತೆಯ ಉಗಮದ ಬಗ್ಗೆ ಇನ್ನೂ ಕೆಲವು ಅಭಿಪ್ರಾಯಗಳನ್ನು ಗಮನಿಸಿದಾಗ "ಶ್ರೀ ಭಗವತ್ ಶರಣ ಉಪಾಧ್ಯಾಯ ಅವರು ಇತರ ದೇಶಗಳಲ್ಲಿ ವರ್ಗಗಳು ತಲೆ ಎತ್ತಲು ಹಾಗೂ ಬೆಳೆದು ನಿಲ್ಲಲು ಕಾರಣರಾದ ವ್ಯಕ್ತಿಗಳೇ ಬಹುಶಃ ವರ್ಣ ವ್ಯವಸ್ಥೆಗೂ ಕಾರಣರಾಗಿರಬಹುದು ಎಂಬುದರಲ್ಲಿ ಅನುಮಾನವೇನೂ ಇಲ್ಲ" ಎನ್ನುತ್ತಾರೆ. ಅಂದರೆ ವರ್ಣ ಎಂಬುದು ವರ್ಗ ಎಂಬ ಸಾಮಾಜಿಕ ವ್ಯವಸ್ಥೆಗೆ ಕೊಟ್ಟ ಹೆಸರೇ ಆಗಿದೆ ಎಂಬ ಅಂಶವನ್ನು ಸೂಚಿಸುತ್ತಾರೆ. ಹುಟ್ಟಿನಿಂದ ಸಾಯುವವರೆಗೂ ನಮ್ಮ ಬದುಕಿನ ವ್ಯವಹಾರಗಳನ್ನು ನಿಯಂತ್ರಿಸುವುದೇ 'ಜಾತಿ' ಎಂದು ತೋರುತ್ತದೆ. 'ಜಾತಿಪದ್ಧತಿ' ಯಲ್ಲಿ ಸಾವೂ ಕೂಡ ಸಮಾನತೆಯನ್ನು ತರಲಾರದು. ಬೇರೆ ಬೇರೆ ಜಾತಿಗಳಿಗೆ ಪ್ರತ್ಯೇಕ ಸ್ಮಶಾನಗಳೇ ಇರಬೇಕು ಎನ್ನುವ ನಿಯಮವನ್ನು ಕೌಟಿಲ್ಯ ವಿಧಿಸುತ್ತಾನೆ" ಮಾನವನ ದುಷ್ಟ ಬುದ್ಧಿ ಸೃಷ್ಟಿಸಿದ ಅಸಮಾನತೆಯ ಹಾಗೂ ಕ್ರೌರ್ಯದ ವ್ಯವಸ್ಥೆಯೇ ಜಾತಿಪದ್ಧತಿ. ಜಾತಿಪದ್ಧತಿ ಭಾರತೀಯನ ಬೌದ್ಧಿಕತೆಯನ್ನು ಎಷ್ಟು ನಿಸ್ಸತ್ವಗೂಳಿಸಿದೆಯೆಂದರೆ ಬದುಕಿನ ಯಾವುದೇ ರಂಗದಲ್ಲೂ ಜಾತಿ ಭೇದವನ್ನಲ್ಲದೆ ಮತ್ತೇನನ್ನೂ ನೋಡಲಾಗದ ಕುರುಡನಂತಾಗಿದ್ದಾನೆ. ಹಿಂದೂ ಧಾರ್ಮಿಕ ಜಗತ್ತಿನ ಜೀವ–ನಿರ್ಜೀವ ವಿಭಾಗಗಳೆರಡರಲ್ಲೂ ಜಾತಿಭೇದ ವ್ಯಕ್ತವಾಗುತ್ತದೆ.